Regd No M 1299

ಸತ್ಯವಾದಿ ಸೋಮವಾರ ಸಂಚಿಕೆ
ಶ್ರೀ ದ್ವಾರಕಾ ಜಗದ್ಗುರುಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುವ
ಪ್ರಬೋಧ
ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿ
ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ]—14—0

ಸತ್ಯವಾದಿ
SATYAVADI

ಸ್ಥಾಪಕರು- ಆರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಗೋರಕ್ಷಣ
[ಶಿಂಗಳಿಗೊಂದಾಪರ್ಷ]
ವಾರ್ಷಿಕಚಂದಾ ಅಂಚೆವೆಚ್ಚ ಸೇರಿ 8 ಆಣೆ

Protect the Cow
ಗೋರಕ್ಷಣೆ ನಡೆಯಲಿ

— ವಿಷ್ಣು ವಾಣಿ —

ದಯೆಯು ನ್ಯಾಯದೃಷ್ಟಿಯನ್ನು ಹದಗೊಳಿಸಿ ಪಕ್ವ ಮಾಡಿದಾಗ ತ್ಕಿಕ ಪ್ರಭುಶಕ್ತಿಯೇ ದೈವಿಕ ಪ್ರಭುಶಕ್ತಿಗೆ ಸರಿಸಮವೆನಿಸೀತು. —ಷೇಕ್ಸ್‌ಪಿಯರ್

ಮೈಸೂರು ಸರ್ಕಾರ ಪ್ರಕಟಣೆಯು ನ್ನಿತ್ತು ಬೆಣ್ಣೆ ರಫ್ತಿನ ಮೇಲಿದ್ದ ನಿರ್ಬಂಧವನ್ನು ರದ್ದುಪಡಿಸಿರುವುದಾಗಿ ತಿಳಿಸಿದೆ.

ಕಳೆದ ವರ್ಷ ಏಪ್ರಿಲ್ ತಿಂಗಳಿನಲ್ಲಿ ಅಗಿದ್ದ ನೆಹ್ರು-ಲಿಯಾಕತ್ ಅಲಿ ಒಪ್ಪಂದ, ಅಖಿಲ ಭಾರತ ಫರ್ಮ್ಟ್ ಜೀರ್ಗ್ ಭಾರತದಲ್ಲಿ ಸನಾತನೇಶವಾಗಲು ಅವಕಾಶ ಕೊಟ್ಟಿದುದರಿಂದ ಮುಂದೆಂತಾಯಿತೆಂದು ಪಾಕ್ ಸರ್ಕಾರ ಭಾರತ ಸರ್ಕಾರಕ್ಕೆ ಪ್ರತಿಭಟಿಸಿದೆಯೆಂದು ಕರಾಚಿ ವಾರ್ತೆ.

ನಾಳೆ ದಿವಸ ಅರಸೀಕೆರೆಯಲ್ಲಿ ಪ್ರಖ್ಯಾತ ನೇತ್ರ ವೈದ್ಯ ಡಾ॥ ಮೋದಿಯವರೆಗೆ ಮೈಸೂರು ಪ್ರಾಂತ್ಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಬಿನ್ನವತ್ತಳೆ ಅರ್ಪಿಸಲಾಗುವುದು.

ಬೊಂಬಾಯಿ ಸರ್ಕಾರ ಬಳಿವ ತಿಂಗಳು ಪ್ರಥಮ ವಾರದಿಂದ ಆಹಾರ ಧಾನ್ಯ ಬೆಲೆ ಅಧಿಕಿಸಲು ನಿರ್ಧರಿಸಿದೆ.

ತರೀಕೆರೆಯಲ್ಲಿ ಠಾಗಿಗಿ ಅಭಾವವಾಗಿದೆ.

ಬೊಂಬಾಯಿನಲ್ಲಿ ಅರಿವೆ ಅಭಾವ: ಕಳ್ಳಪೇಟೆ ಹೆಚ್ಚಿರೋಣರಿಂದ ನೂತನ ವಿಧದ ಸೀದಾ ಜೈಂಗೆ ಬಂಲಿರುವ ವಾರ್ತೆ ಇದೆ.

ತಾ | 26 ರಲ್ಲಿ ರಿಪಬ್ಲಿಕ್ ದಿನಾಚರಣೆ ಪ್ರಯುಕ್ತ ಸಿಂಗಪುರದಲ್ಲಿ ಭಾರತದ ಬಾವುಟ ಹಾರಿಸಬಹುದು.

ಪೇರಿಸಿನಲ್ಲಿ ನಿನ್ನೆ ಪಂ॥ ನೆಹರು ಫ್ರಾನ್ಸಿನ ಅಧ್ಯಕ್ಷ ಅರಿಯೋಲಂನ್ನು ಸಂದರ್ಶಿಸಿದರು.

ಥಕ್ಕರ ಬಾಪಾ ಸ್ಥಿತಿ ಕಳವಳಕಾರಿಯೆಂದು ಭಾವನಗರ ವರದಿ

ಕೆಂಪು ಚೀನಕ್ಕೆ ವಿಶ್ವಸಂಸ್ಥೆ ಪ್ರವೇಶ ಶಾಶ್ವತವಾಗಿ ಜಪಾನ್ ಪುನಶ್ಚಸ್ತ್ರೀಕರಣ ಮಾಡದಿರುವುದು ವಿಶ್ವಶಾಂತಿಗೆ ಸಹಾಯವಾಗುವದೆಂದು ಪಂ॥ ನೆಹರು ಪೇರಿಸಿನಲ್ಲಿ ತಿಳಿಸಿದ್ದಾರೆ

ಬರುವ ತಿಂಗಳು ಕಡೇ ವಾರದಲ್ಲಿ ಬೆಂಗಳೂರಿನಲ್ಲಿ ನಡೆಯುವ ಕಾಂಗ್ರೆಸ್ ವಸ್ತು ಪ್ರದರ್ಶನ ಉದ್ಘಾಟನೆ ಮಾಡಲು ಪ್ರಭುಗಳನ್ನು ಪ್ರಾರ್ಥಿಸುವ ವಾರ್ತೆ ಇದೆ.

ಆಹಾರವೂ, ಕಾಂಗ್ರೆಸ್ಸೂ

ಹರಿಜನರಾಗಲಿ, ಬೇರೆ ಯಾವ ನಿಮ್ನ ಜಾತಿಯವರಾಗಲೀ, ಅವರ ಕೈಯಿಂದ ಒಡಿಸಿದಲ್ಲಿ ಮಹಾಪಚಿತ ಭೋಜನವಾದಂತೆ ಕೆಲವರು ಭಾವಿಸುತ್ತಾರೆ. ನಂಬಿಕೆ ಇಲ್ಲದವರಿಗೆ ಇಲ್ಲದೇ ಹೋಗಬಹುದಾಗಲೀ, ಅಶಾಢಭೂತಿಯ ಕಥೆಯಂತೆ, ಅತನನ್ನು ಒಬ್ಬರು ಊಟಕ್ಕೆ ಕರೆದರಂತೆ! ಊಟ ಮಾಡಿದ ಮೇಲೆ ಆತನು ಆ ಮನೆಯಿಂದಲೇ ಒಂದು ಬೆಲೆಯುಳ್ಳ ಪದಾರ್ಥವನ್ನು ಅಪಹರಿಸಿ ತನ್ನ ಚೀಲದಲ್ಲಿಟ್ಟುಕೊಂಡು ಹೋಗುತ್ತಿದ್ದನಂತೆ! ಮನೆಯವರು ಆತನನ್ನು ಹಿಂಬಾಲಿಸಿ ಹಿಡಿದು ಪ್ರಶ್ನಿಸಲು, ತನಗೆ ಏನೂ ತಿಳಿಯದೆಂದು ಹೇಳಿದನಂತೆ! ಆಗ ಚೀಲದಲ್ಲಿ ಹುಡುಕಿದಾಗ ಆ ಪದಾರ್ಥವು ಸಿಕ್ಕಿತಂತೆ!

(ಹಿಂದಿನ ಪುಟ ನೋಡಿ)

ನೆಹರು ಪ್ರತಿಪಾದನೆ
ಮನಗಾಣಿಸುವಂತಿಲ್ಲವಂತೆ !

ನೇಪಾಳಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೊಯಿರಾಲಾ ನಿನ್ನೆ ದೆಹಲಿಯಲ್ಲಿ ಹೇಳಿಕೆ ಇತ್ತು, ನೇಪಾಳದಲ್ಲಿ ಕಾಂಗ್ರೆಸಿಗರು ಕದನ ನಿಲ್ಲಿಸಬೇಕೆಂದು ನಾನು ತಿಳಿಸಿದನೇ ವಿನಃ ವಶಪಡಿಸಿಕೊಂಡಿರುವ ಪ್ರದೇಶಗಳನ್ನು ಬಿಟ್ಟುಕೊಡಬೇಕೆಂದು ತಿಳಿಸಲಿಲ್ಲ ವೆಂದರು.

ಭಾರತಕ್ಕೆ 20 ಲಕ್ಷ ಟನ್ ಗೋಧಿ ಕಳಿಸಬೇಕೆಂದು ಪರರಾಷ್ಟ್ರಗಳನ್ನು ಕೇಳಲಾಗಿದೆ – ಎಂದು ಸರ್ ಬಿ ಎನ್ ರಾವ್ ಪೇರಿಸಿನಲ್ಲಿ ತಿಳಿಸಿದ್ದಾರೆ

ಶಿವಮೊಗ್ಗೆಯಲ್ಲಿ ಸಕ್ಕರೆ ಪರಿಸ್ಥಿತಿ ಸಮರ್ಪಕವಾಗಿಲ್ಲವೆಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ

ಲಂಡನ್ನಿನ 'ಡೇಲಿ ಹೆರಾಲ್ಡ್' ಪತ್ರಿಕೆಯ ವ್ಯಂಗ ಚಿತ್ರಕಾರ ಲೋ ಅವರು ಒಂದು ವ್ಯಂಗ ಚಿತ್ರ ತೆಗೆದಿದ್ದು ಅದರಲ್ಲಿ ಚೀನಾದ ದೊಡ್ಡ ಗೋಡೆಗೆ ತಲೆಯಿಂದ ಹಾಯುವ ಒಂದು ಗೂಳಿಯು ಬಾಗಿಲು ಬಳಿ ನಿಂತಿದೆ. ಅದರ ಮಗ್ಗುಲಿಗೆ ಪಂ॥ ನೆಹರುರವರು ನಿಂತಿದ್ದು 'ಅಯ್ಯೋ ನಾನೊಂದು ಉಪಯೋಗವನ್ನ ಸೂಚಿಸಲೆ! ಆದರೆ ಅದು ತಲೆಗೆ ಸಂಬಂಧಿಸಿದ್ದಲ್ಲ ಅದರ ಅಂಗಗಳಿಗ ಸಂಬಂಧಿಸಿದ್ದು' ಎಂದು ಕೂಗಿಕೊಂಡಂತೆ ಚಿತ್ರಿಸಲಾಗಿದೆ. ಈ ಚಿತ್ರಕ್ಕೆ 'ನಿಶ್ಶಬ್ದ ಧ್ವನಿ' ಎಂದು ತಲೆ ಬರಹ ಕೊಡಲಾಗಿದೆ.

ಮದರಾಸಿನಲ್ಲಿ ಬೆಲ್ಲ ಅಭಾವವಿರುವ ಸ್ಥಳಗಳಲ್ಲಿ ಬೆಲ್ಲದ ಬೆಲೆ ಅಧಿಕಿಸುವ ವರದಿ ಇದೆ.

ಅರಸೀಕೆರೆ ಮಿಡ್ಲ್‌ಸ್ಕೂಲ್ ಮೇಷ್ಟ್ರು ವಿದ್ಯಾರ್ಥಿಗೆ ಚಾಸುಂಡೆ ಬರೋಹಾಗೆ ಹೊಡೆದಿದ್ದಾರೆ.

ಲಂಡನ್ನಿನ 'ಸ್ಯಾಟ್ಸ್‌ಮನ್' ಪತ್ರಿಕೆ ಹೀಗೆ ಬರೆದಿದೆ — ಹೈದರಾಬಾದ್ ಹಾಗೂ ಕಾಶ್ಮೀರಗಳಿಂಡರ ಬಗೆಗೂ ಭಾರತ ಒಂದೇ ಮಾರ್ಗ ಅನುಸರಿಸುವದು ಸರಿಯಲ್ಲ ಹೈದರಾಬಾದಿನ ವಿಷಯ ಹಿಂದುಗಳೆಂದು ಭಾರತವು ಅದರ ಮೇಲೆ ತನ್ನ ಹಕ್ಕು ಸಾಧಿಸಿತು ಕಾಶ್ಮೀರದಲ್ಲಿ ಬಹು ಸಂಖ್ಯಾಕರು ಮುಸ್ಲಿಮರಿದ್ದರೂ ಕಾಶ್ಮೀರವನ್ನು ಭಾರತ ಬೇಡುತ್ತಿದೆ ಶ್ರೀ ನೆಹರು ಅವರ ಪ್ರತಿಪಾದನೆಯು ಮನಗಾಣಿಸುವಂಥದಲ್ಲ.

ಕೊರಿಯ ಶಾಂತಿ ಬಗ್ಗೆ ಪಂ॥ ನೆಹರು ಇನ್ನೂ ನಿರಾಶರಾಗಿಲ್ಲವೆಂದು ದೆಹಲಿ ವಾರ್ತೆ

ಕಾಶ್ಮೀರದ ಬಗೆಗೆ ಲಿಯಾಕತ್ ಅಲಿ ಖಾನರು ಪತ್ರಿಕಾ ಸಂವೇದನದಲ್ಲಿ ಹೇಳಿದ ವಿಷಯಗಳ ಬಗೆಗೆ ಅಭಿಪ್ರಾಯ ವ್ಯಕ್ತ ಪಡಿಸಲು ಬ್ರಿಟನ್ ಅಧಿಕಾರ ವರ್ಗಗಳು ನಿರಾಕರಿಸಿವೆ.

ಕಾಶ್ಮೀರ ಸಮಸ್ಯೆಯನ್ನು ಬಿಡಿಸದೆ ಹೋದರೆ ದೀರ್ಘ ಪರಿಣಾಮ ಅಗುವದೆಂದು ನನ್ನ ನಂಬಿಕೆಯಾಗಿದೆ — ಹೀಗೆಂದು ಆಸ್ಟ್ರೇಲಿಯ ಪ್ರಧಾನಿ ಮಿ. ರಾಬರ್ಟ್ ಮೆಂಜಿಸರು ಕಾರ್ಮನ್‌ವೆಲ್ತ್ ಪ್ರಧಾನ ಮಂತ್ರಿಗಳ ಪರಿಷತ್ತಿನಲ್ಲಿ ಕಾಶ್ಮೀರದ ಬಗ್ಗೆ ನಡೆದ ಅನೌಪಚಾರಿಕ ಮಾತುಕತೆಗಳ ವಿಷಯವಾಗಿ ಮೊನ್ನೆ ಲಂಡನ್ನಿನಲ್ಲಿ ತಿಳಿಸಿದರು.

ಭಾರತದ ಬಗೆಗೆ ಕೆಟ್ಟ ಅಭಿಪ್ರಾಯ ಮೂಡಲು ಕಾರ್ಮನ್‌ವೆಲ್ತ್ ಪ್ರಧಾನಿಗಳಾದ ಕಾಶ್ಮೀರ ಮಾತುಕತೆಯನ್ನ ರಹಸ್ಯವನ್ನು ಲಿಯಾಕತ್ ಅಲಿಯವರು ಒಪ್ಪಿರಂಗ ಮಾಡಿದರೆಂದು ಲಂಡನ್ನಲ್ಲಿ ನಿರೀಕ್ಷಕರ ಅಭಿಪ್ರಾಯ.

ಆಗ ಹೀಗೆಕಾಗಲು ಕಾರಣವೇನೆಂದು ಯೋಚಿಸಿ, ಸ್ವಾಮಿ! ಇವತ್ತು ನನಗೆ ಭೋಜನವನ್ನು ಮಾಡಿಸಿದರಲ್ಲಾ, ಆ ಪದಾರ್ಥಗಳನ್ನು ಎಲ್ಲಿಂದ ತಂದಿರಿ? ಎಂದು ಕೇಳಿದನಂತೆ! ಆಗ ಅಕ್ಕಿಯನ್ನು ನೆರೆಮನೆಯಲ್ಲಿರುವ ಆಗಸಾಲಿಗನಿಂದ ತಂದಂತೆ ಹೇಳಿದರಂತೆ! ಆಗ ಆತನು, ನೀವು ನನಗೆ ಭೋಜನವನ್ನಿಟ್ಟು ನನ್ನ ಸರ್ವನಾಶವನ್ನು ಮಾಡಿದಿರಿ. ಆಗಸಾಲಿಗನು ತನ್ನ ಮಗಳ ಆಭರಣ ಮಾಡುವದರಲ್ಲಿ ಕೂಡ ಅಳೆಯು ಕೊಡುವ ಭಂಗಾರದಲ್ಲಿ ಸ್ವಲ್ಪ ಅಪಹರಿಸದೆ ಇರ್ಪುದು ಅಪರೂಪ. ಆದುದರಿಂದ ನನಗೆ ತಿಳಿಯದೆಯೇ ಆ ಭೋಜನದ ಪ್ರಭಾವದಿಂದ ಈ ಪದಾರ್ಥವು ನನ್ನ ಕೈಯ್ಯಿಂದಲೇ ಈ ಚೀಲದೊಳಕ್ಕೆ ಹೋಗಿ ಸೇರಿಕೊಂಡಿತು, ಎಂದು ತಿಳಿಸಿ, ಆ ಪದಾರ್ಥವನ್ನು ಅವರಿಗೆ ಕೊಟ್ಟು ತನ್ನ ದಾರಿಯನ್ನು ಹಿಡಿದು ಮುಂದೆ ಹೊರಟುಹೋದನಂತೆ!

ಈ ಮಾತುಗಳನ್ನು ಕೇಳಿದಾಗ, ಇದೆಲ್ಲಾ ಕಲ್ಪನೆ, ಮಾತಿಗೇನು ಯಾರಂದರೆ ಅವರು ತಮ್ಮ ಇಚ್ಛೆ ಬಂದಂತೆ ಹೇಳುವರು, ಎಂದೆನ್ನುವರು. ನಿಜವಾಗಿಯೂ ಆಹಾರವು ಅತಿ ಪವಿತ್ರವಾಗಿರತಕ್ಕದ್ದು: ಆಹಾರವನ್ನನುಸರಿಸಿ ಗುಣವುಂಟಾಗುವಿಕೆ; ಆಹಾರ ಶುದ್ಧಿಯೇ ಚಿತ್ತಶುದ್ಧಿಗೆ ಕಾರಣವಾದದ್ದು: ಆಹಾರ ಶುದ್ಧಿಯೆಂದರೆ, ಶುದ್ಧವಾಗಿ ತಯಾರಿಸಿದ ಆಹಾರ ಮಾತ್ರವೇ ಅಲ್ಲ; ಹಿಂಸೆ ಮೋಸ ಚೌರ್ಯ ಆಲಸ್ಯ ಮೊದಲಾದುವುಗಳಿಲ್ಲದೆ, ಕಷ್ಟಾರ್ಜಿತವಾದುದಾಗಿರತಕ್ಕದ್ದು; ಲಂಚ ಮುಷವತ್ತು ಚೌರ್ಯ ಬಡ್ಡಿ ಮೋಸ ಹಿಂಸೆ ಅನ್ಯಾಯೋಪಾರ್ಜಿತಗಳಿಂದ ಕೂಡಿದ ಅರ್ಜನೆಯು ಎಂದಿಗೂ ಕಷ್ಟಾರ್ಜಿತವೆನಿಸಿಕೊಳ್ಳಲಾರದು.

[ಮುಂದುವರಿಯುವುದು

SHAKTI SUDHA

A Superb Tonic

"ಗೋರಕ್ಷಣ"

ತಿಂಗಳಿಗೊಂದಾವರ್ತಿ ಪ್ರಕಟವಾಗುವುದು

ಐ. ಟಿ. ಎಲ್. ಗ್ರೈಪ್ ಸಿರಪ್

ಸಿಹ್ಮು ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತವಾಸ

— ತಯಾರಕರು —
ದಿ ಮೈಸೂರು ಇಂಡೆಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ ಲಿಮಿಟೆಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ಐ.ಟಿ.ಎಲ್ ಗ್ರೈಪ್ ಸಿರಪ್

ಅಪೇರಾ 18-1-51 ರಿಂದ

ಪ್ರಕಾಶ್, ಗುಲ್ಜಾರ್, ಬಚ್ಚೂ, ಶಿರಾಜ್, ಮನ್ಸೂರ್, ಇಂದ ಬಾಲ ಪಾತ್ರವಹಿಸಿರುವ ಸೊಗಸಾದ ಹಿಂದಿ ಚಿತ್ರ

ಫ್ಲೈಯಿಂಗ್ ಎಕ್ಸ್‌ಪ್ರೆಸ್
Flying Express

ರಣಜಿತ್ ಯಶಸ್ವಿ 2 ನೇ ವಾರ

Nirala ನಿರಾಲ

ಪಾತ್ರ— ಮಧುಬಾಲಾ, ದೇವಾನಂದ, ಯಾಕೂಬ್, ಮುಬಾರಕ್

ಇತರ ಚಿತ್ರಗಳಲ್ಲಿ ಕಾಣದಿರುವ ಅನೇಕ ಸನ್ನಿವೇಶಗಳು ಈ ಹಿಂದಿ ಚಿತ್ರದಲ್ಲಿವೆ

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ — 19—1—51 ರಿಂದ — 3 ದಿನಗಳು

ಷಹರ್ ಸೆ ದೂರ್

ಪಾತ್ರ— ಮೀನಾ, ಅಲ್ ನಸೀರ್, ಓಂ ಪ್ರಕಾಶ್ (ಹಿಂದಿ)

ಉಡ್‌ಲಾಂಡ್ ಶಿಸ್ಸು

14-1-51 ರಿಂದ

ವೀರ ಬಬ್ರುವಾಹನ



ಶಶಿಕಪೂರ್ — ಮೃದುಲ್ ಅಭಿನಯಿಸಿರುವ ಸಾಹಸ, ರೋಮಾಂಚದಾಯಕ, ಆನಂದಕರ ಸನ್ನಿವೇಶಗಳಿಂದ ಕೂಡಿದ ಅಮೋಘ ಹಿಂದಿ ಚಿತ್ರ

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ

19—1—51 ರಿಂದ 3 ದಿವಸಗಳು

ನಂಜೋಗ್

ಪಾತ್ರ— ಚಾರ್ಲಿ, ಮೆಹತಾಬ್, ಉಲ್ಲಾಸ್, ವಾಸ್ತಿ (ಸುಂದರ ಹಿಂದಿ ಚಿತ್ರ)

ಸತ್ಯವಾದಿ
ದಿನಪತ್ರಿಕೆ ತಿಂಗಳಿಗೆ 6 ಆಣೆಗಳು
ಪಾಸ್ಟಳಕ್ಕೆ ಅಂಚೆವೆಚ್ಚ ಸೇರಿ 12 ಆಣೆ

For Quality Printing
L. N. Press
Sivarampet, Mysore

Edited, Printed and Published by M. S. Krishna Rau, at the Satyavadi Press Chamarajpuram Mysore